ರಚಿಸಿದ್ದು ಈ ಸಮಿತಿಯ ಶಿಫಾರಸ್ಸಿನಂತೆ ಅಂತಹ ಸಹಕಾರ ಸಕ್ಕರೆ ಕಾರ್ಖಾನೆಗಳ ಪುನಶ್ಚೇತನ ಮಾಡಲು ಸಾಧ್ಯವೇ ಎಂಬುದರ ಬಗ್ಗೆ ವರದಿ ಆಧರಿಸಿ ಕ್ರಮವಿಡುವಲ್ಲಿ ಬರುವುದು.

ಇ) ಸಕ್ಕರೆ ಉದ್ದಿಮೆಯನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಸರ್ಕಾರ ಈ ಕೆಳಗಿನ ಕ್ರಮಗಳನ್ನು ಕೈಗೊಂಡಿರುತ್ತದೆ.

1. ದಿ: 30.03.2003 ರ ವರೆಗೆ ಖರೀದಿ ತೆರಿಗೆಯಿಂದ ಟನ್ ಒಂದಕ್ಕೆ ರೂ. 03 ರಂತೆ ಪ್ರೋತ್ಸಾಹ ಧನವಾಗಿ ನೀಡಲಾಗುತ್ತಿದೆ. ಈ ಯೋಜನೆಯನ್ನು ಮುಂದುವರಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಕ್ರಮವಿಡಲಾಗಿದೆ.
2. ಸಹ ವಿದ್ಯುತ್ ಘಟಕವನ್ನು ಹೊಂದಿರುವ ಸಕ್ಕರೆ ಕಾರ್ಖಾನೆಗಳು ಅವು ಉತ್ಪಾಸಿದಿಸಿ ರಫ್ತು ಮಾಡುವ ವಿದ್ಯುತ್ತಿಗೆ ರೂ. 23 ಲಕ್ಷ ಬಂಡವಾಳ ಸಹಾಯ ಧನವನ್ನು ದಿನಾಂಕ: 01-04.2000 ರಿಂದ 30.03.2004ರ ವರೆಗೆ 3 ವರ್ಷಗಳ ಅವಧಿ ವಿಸ್ತರಿಸಲಾಗಿದೆ.
3. ದಿನಾಂಕ 01.04.2000 ರಿಂದ ಸಕ್ಕರೆ ಕಾರ್ಖಾನೆಗಳು ರಫ್ತು ಮಾಡುವ ಸಕ್ಕರೆ ಇಳುವರಿ ಪ್ರಮಾಣದ ಅನುಗುಣವಾಗಿ ಖರೀದಿ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತಿದೆ. ಈ ರೀತಿ ಸಕ್ಕರೆ ರಫ್ತು ಮಾಡುವ ಪ್ರಮಾಣಕ್ಕೆ ನೀಡುವ ಖರೀದಿ ತೆರಿಗೆ ರಿಯಾಯಿತಿ ಆಯಾ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ಇಳುವರಿ ಪ್ರಮಾಣದ ಆಧಾರದ ಮೊತ್ತ ಒಂದು ಟನ್ ಸಕ್ಕರೆಗೆ ಸುಮಾರು ರೂ. 450 ರಿಂದ 530 ರಿಯಾಯಿತಿ ಸಿಗುತ್ತದೆ.

ಕ್ರಿಶ್ಚಿನ್ ಸಮುದಾಯಕ್ಕೆ ಸರ್ಕಾರದಿಂದ ನೆರವು

4143 (4756) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕ್ರಿಶ್ಚಿಯನ್ ಸಮುದಾಯವು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರುವುದಿಲ್ಲವೇ;

ಆ) ಈ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರವು ರೂಪಿಸಿರುವ ಕಾರ್ಯಕ್ರಮಗಳೇನು; ಈ ಕಾರ್ಯಕ್ರಮಗಳ ಅನುಷ್ಠಾನದ ಹೊಣೆಗಾರಿಕೆಯನ್ನು ಯಾರು ನಿರ್ವಹಿಸುತ್ತಾರೆ.

ಇ) ಈ ಸಮುದಾಯದ ಚರ್ಚ್‌ಗಳಿಗೆ ಮತ್ತು ಪೂಜಾ ಮಂದಿರಗಳಿಗೆ ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯ ದೊರಕದೇ ಇರುವುದು ಸರ್ಕಾರವು ಮನಗಂಡಿದೆಯೇ;

ಈ) ಹೀಗೆ ದೊರಕದೇ ಇರುವುದಕ್ಕೆ ಕಾರಣವೇನು?

ಉ) ಚರ್ಚ್‌ಗಳಿಗೆ ಮತ್ತು ಪೂಜಾಮಂದಿರಕ್ಕೆ ಆರ್ಥಿಕ ಸಹಾಯ ದೊರಕಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುತ್ತದೆ.

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ಸ ರಾಜ್ಯ ಸಚಿವರು)

ಅ) ಕ್ರಿಶ್ಚಿಯನ್ ಸಮುದಾಯವನ್ನು ಮತೀಯ ಅಲ್ಪಸಂಖ್ಯಾತ ಸಮುದಾಯವೆಂದು ಸರ್ಕಾರವು ಪರಿಗಣಿಸಿದೆ.

ಆ) ಅಲ್ಪಸಂಖ್ಯಾತರ ಇಲಾಖಾವತಿಯಿಂದ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ--1ರಲ್ಲಿ ವಿವರಿಸಿದೆ. ಈ

ಕಾರ್ಯಕ್ರಮಗಳನ್ನು ಜಿಲ್ಲಾಮಟ್ಟದಲ್ಲಿ ಆಯಾಯ ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು ನಿರ್ವಹಿಸುವರು.

ಇ) ಯಿಂದ ಉ)

ಹೌದು, 2003–04ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಗ್ರಾಮಾಂತರ ಪ್ರದೇಶದ ಹಳೆಯ ದೇವಸ್ಥಾನಗಳನ್ನು ಮಸೀದಿಗಳನ್ನು, ಚರ್ಚ್‌ಗಳನ್ನು ಗುರುದ್ವಾರಗಳನ್ನು ಹಾಗೂ ಮಸೀದಿಗಳನ್ನು ದುರಸ್ಥಿತಿಗೊಳಿಸಲು ಮುಖ್ಯ ಮಂತ್ರಿಗಳ ನಿಧಿಯನ್ನು ಸ್ಥಾಪಿಸುವುದಾಗಿ ಪ್ರಕಟಿಸಿರುತ್ತಾರೆ. ಇದರ ಪ್ರಾರಂಭಿಕ ನಿಧಿ 1.00 ಕೋಟಿ ರೂಪಾಯಿಗಳಾಗಿರುತ್ತವೆ. ಈ ನಿಧಿಯಿಂದ ಒಂದು ಸಂಸ್ಥೆಗೆ ಒಂದು ಬಾರಿಗೆ ಮಾತ್ರ ರೂ. 10,000 ಗಳಿಗೆ ಮಿತಿಗೊಳಿಸಿ ಸಹಾಯಧನವನ್ನು ನೀಡಲಾಗುವುದು. ಸಾರ್ವಜನಿಕ ವಂತಿಕೆಯಿಂದ ನಿಧಿಯನ್ನು ಬಲಗೊಳಿಸಲಾಗುವುದು.

ಪಿರಿಯಾ ಪಟ್ಟಣದ ಅಲ್ಪಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಇಲಾಖೆಯ ಮತಿಯಿಂದ ಅಳವಡಿಸಲಾಗಿರುವ ಯೋಜನೆಗಳು

4150 (4609) : ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳಲ್ಲಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಮತಿಯಿಂದ ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ; (ವಿವರವನ್ನು ಪ್ರತ್ಯೇಕವಾಗಿ ವರ್ಷವಾರು ನೀಡುವುದು)

ಆ) ಯೋಜನೆ ಜಾರಿಗೊಳಿಸಿದ ನಂತರ ಅದನ್ನು ಪೂರ್ಣಗೊಳಿಸಲಾಗಿದೆಯೆ; ಅಂತಹ ಪ್ರಕರಣಗಳ ವಿವರ ನೀಡುವುದು;

ಇ) ಮೇಲ್ಕಂಡ ಇಲಾಖಾಮತಿಯಿಂದ ಗ್ರಾಮಾಂತರ ಪ್ರದೇಶದ ಸಾರ್ವಜನಿಕರಿಗೆ ನೀಡಲಾಗುವ ಸೌಲಭ್ಯಗಳು ಯಾವುದು;

ಈ) ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಯೋಜನೆಗಳ ಜಾರಿಯಲ್ಲಿ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ) ಬಂದಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಆ ಮತ್ತು ಇ

ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಗಳಿಂದ ಕಳೆದ ಮೂರು ವರ್ಷಗಳಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದ ಕಾರ್ಯಕ್ರಮಗಳನ್ನು ಮತ್ತು ಪೂರ್ಣಗೊಂಡವನ್ನು ಅನುಬಂಧ–1ರಲ್ಲಿ ನೀಡಿದೆ.

ಈ) ಯೋಜನೆಯ ಅನುಷ್ಠಾನದಲ್ಲಿ ಯಾವುದೇ ವ್ಯತ್ಯಾಸವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.